

### ಪ್ರಶಸ್ತಿಗಳು

ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ, ವೃಕ್ಷಮಿತ್ರ ಪ್ರಶಸ್ತಿ, ಶ್ರೀಮತಿ ಕವಿತಾ ಸ್ಮಾರಕ ಪ್ರಶಸ್ತಿ, ಇಂಡವಾಳು ಎಚ್. ಹೊನ್ನಯ್ಯ ಸಮಾಜ ಸೇವಾ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಶ್ರೀ ವಿ.ಆರ್. ದೇಶಪಾಂಡೆ ಮೆಮೋರಿಯಲ್ ಟ್ರಸ್ಟ್ ಸನ್ಮಾನ ಸೇರಿದಂತೆ ಹಲವಾರು ಪ್ರಶಸ್ತಿ ಪುರಸ್ಕಾರಗಳು ಸಂದಿವೆ.

ವರ್ಷ ಸತತವಾಗಿ ದುಡಿದಿದ್ದೇನೆ. ದುಡಿತದ ಬಗ್ಗೆ ಹೆಮ್ಮೆ ಇದೆ. ಆದ್ದರಿಂದಲೇ ನನ್ನನ್ನು ಜನ ಗುರುತಿಸಿದರು. ಈಗ ನನಗೆ ಎಂಬತ್ತೂರು ವರ್ಷ. ಈಗ ದುಡಿಯಲು ಆಗುತ್ತಿಲ್ಲ. ಪಿಂಚಣಿಯಲ್ಲಿ ಜೀವನ ಮಾಡುತ್ತಿದ್ದೇವೆ. ಮಕ್ಕಳಿಬ್ಬರೂ ಕೂಲಿಗೆ ಹೋಗುತ್ತಾರೆ. ನನ್ನ ಮೊಮ್ಮಕ್ಕಳಿಗೆ ಅರಣ್ಯ ಇಲಾಖೆಯಲ್ಲಿ ಕೆಲಸ ಕೊಡಿಸಿದರೆ ಅನುಕೂಲವಾಗುತ್ತದೆ. ಇದ್ದ ಸಣ್ಣ ಗದ್ದೆ ತುಂಡಿನಲ್ಲಿ ಎಲ್ಲರೂ ಜೀವನ ಸಾಗಿಸಲು ಆಗುವುದಿಲ್ಲ. ಅರಣ್ಯ ಇಲಾಖೆ, ಸರ್ಕಾರ ಸಹಾಯ ಮಾಡಿದರೆ ನನ್ನ ದುಡಿತಕ್ಕೆ ಸಾರ್ಥಕತೆ ಸಿಗುತ್ತದೆ. ಹಿಂದೊಮ್ಮೆ ಮೊಮ್ಮಕ್ಕಳಿಗೆ ಕೆಲಸ ನೀಡುವುದರ ಬಗ್ಗೆ ಯಲ್ಲಪ್ಪ ರೆಡ್ಡಿಯವರಿಗೆ ಹೇಳಿದ್ದೆ. ನೋಡಬೇಕು, ಕೊಡಬಹುದೆಂಬ ನಿರೀಕ್ಷೆ ಇದೆ.

**◆ ಮೊದಲು ನಿಮ್ಮ ಕೆಲಸಕ್ಕೆ ಸಂದ ದೊಡ್ಡ ಗೌರವ 'ಇಂದಿರಾ ಪ್ರಿಯದರ್ಶಿನಿ' ಪ್ರಶಸ್ತಿ. ಅದು ನಿಮಗೆ ಬಂದುದು ಹೇಗೆ?**

ಆ ಪ್ರಶಸ್ತಿ ಬಗ್ಗೆ ಸಂತೋಷ ಇದೆ. ಮೊದಲ ಬಾರಿಗೆ ದಿಲ್ಲಿಗೆ ಹೋಗಿ ಬಂದೆ. ಆ ಪ್ರಶಸ್ತಿ ಬರುವ ಮೊದಲು ಮನೇಕಾ ಗಾಂಧಿ ಅವರು ನಾನು ಕೆಲಸ ಮಾಡುವ ಅಂಕೋಲಾ ತಾಲ್ಲೂಕಿನ ಅಗಸೂರಿನ ಹೊನ್ನಳ್ಳಿ ನರ್ಸರಿಗೆ ಭೇಟಿಕೊಟ್ಟಿದ್ದರು. ನರ್ಸರಿಯ ಅಚ್ಚುಕಟ್ಟುತನ, ಹಸಿರು ಗಿಡಗಳ ಚಂದ ನೋಡಿ ಬೆನ್ನು ತಟ್ಟಿದರು. ಇದಕ್ಕೆ ಕಾರಣರಾದವರು ಯಲ್ಲಪ್ಪ ರೆಡ್ಡಿಯವರು. ಅವರು ಬರೆದ ಪುಸ್ತಕದಲ್ಲಿಯೂ ನನ್ನ ಬಗ್ಗೆ ಬರೆದಿದ್ದಾರೆ. ಅವರ ಪ್ರೋತ್ಸಾಹಕ್ಕೆ ಋಣಿಯಾಗಿದ್ದೇನೆ.

**◆ ಈಗ ಪರಿಸರ ಹಾಳಾಗುತ್ತಿದೆ. ಕೆಲವೆಡೆ ಅತಿಯಾಗಿ ಮಳೆ ಬೀಳುತ್ತಿದೆ, ಕೆಲವು ಕಡೆ ಇಲ್ಲ. ಮಾನವ ಸಂಕುಲ, ಪ್ರಾಣಿ ಸಂಕುಲ ಕಷ್ಟಕ್ಕೆ ಸಿಕ್ಕಿದೆ. ಈ ಬಗ್ಗೆ ಏನು ಹೇಳ್ತೀರಿ?**

ಹಾಳಾದ ಪರಿಸರ ಉಳಿಸುವುದಕ್ಕೆ ಗಿಡ ನೆಡಬೇಕು. ಮರ ಕಡಿಯುವುದನ್ನು ನಿಲ್ಲಿಸಬೇಕು. ಒಣಗಿದ ಮರದ ಬುಡದಲ್ಲಿ ಗಿಡಗಳನ್ನು ನೆಡಬೇಕು. ಕಾಡಿಗೆ ಬೆಂಕಿ ಬೀಳುವುದನ್ನು ತಡೆಯಬೇಕು. ಬೆಂಕಿ ಹಾಕದ ಬಗ್ಗೆ ಜನರಿಗೆ ತಿಳಿ ಹೇಳಬೇಕು. ಕಾಂಗ್ರೆಸ್ ಗಿಡ (ಪಾರ್ಥೆನಿಯಂ) ನಾಶ ಮಾಡಿ ಅಲ್ಲಿ ಗಿಡಗಳನ್ನು ಹಾಕಬೇಕು. ಎಲ್ಲಿ ಬೆಂಕಿಯಿಂದ ಕಾಡು ನಾಶವಾಗುವುದಿಲ್ಲವೋ ಅಲ್ಲಿ ಪ್ರಾಣಿಗಳು ಬೆಳೆಯುತ್ತವೆ. ಪ್ರಾಣಿ ಪಕ್ಷಿಗಳು ಹೆಚ್ಚಾದರೆ ಕಾಡು ಬೆಳೆಯುತ್ತದೆ. ನಾವು ನೀವು ಸೇರಿ ಕಾಡು ರಕ್ಷಿಸೋಣ. ಮರ ಇದ್ದರೆ ಮಾತ್ರ ಮಳೆ. ಮಳೆ ಇಲ್ಲದಿದ್ದರೆ ಏನೂ ಇರುವುದಿಲ್ಲ. ಪರಿಸರ ನಾಶ ಮಾನವ ಕುಲ ನಾಶಕ್ಕೆ ಕಾರಣವಾಗುತ್ತದೆ.

**◆ ಅಂಕೋಲಾದಲ್ಲಿ 'ತುಳಸಿ ಟ್ರೀ ಪಾರ್ಕ್' ಮಾಡುವ ಉದ್ದೇಶವಿದೆಯೆಂದು ಕಾರವಾರದಲ್ಲಿ ಅರಣ್ಯ ಇಲಾಖೆಯ ಹಿರಿಯರು ಹೇಳಿದ್ದಾರಲ್ಲ. ಏನಂತೀರಿ?**

ಹೌದು, ಹಾಗೆ ಹೇಳಿದ್ದಾರೆ. ಖಂಡಿತಾ ಖುಷಿಯಾಗಿದೆ. ಅರಣ್ಯ ಇಲಾಖೆ ನನಗೆ ಕೊಡುವ ಗೌರವ ಎಂದು ತಿಳಿದಿದ್ದೇನೆ. ಆ ಮೂಲಕ ಬೇರೆ ಬೇರೆ ತರದ ಹಣ್ಣಿನ ಗಿಡಗಳು, ಹೂವಿನ ಗಿಡಗಳು, ಕಾಡಿನ ಗಿಡಗಳು ಸಿಗುವಂತಾಗಲಿ. ತುಂಬಾ ಜನರು ಅಲ್ಲಿಗೆ ದಿನಾ ಬಂದರೆ ಪರಿಸರದ ಅರಿವು ಸಹಜವಾಗಿಯೇ ಬರುತ್ತದೆ. ಟ್ರೀ ಪಾರ್ಕ್ ಮಾಡುವ ಉದ್ದೇಶ ಬೇಗ ಈಡೇರಲಿ.

**◆ ಅಜ್ಜಿ, ನಿಮ್ಮ ಮಾರ್ಗದರ್ಶನ ಇಂದಿನ ಪೀಳಿಗೆಗೆ ದೊರೆಯುವುದು ಹೇಗೆ?**

ನಾನು ಎಲ್ಲೇ ಕರೆದರೂ ಅಲ್ಲಿಗೆ ಹೋಗಿ ಗಿಡ ಮರ ಬೆಳೆಸುವ ಬಗ್ಗೆಯೇ ಮಾತಾಡ್ತೇನೆ. ಕಾಡು ಉಳಿಸುವ ಬಗ್ಗೆಯೂ ತಿಳಿಸುತ್ತೇನೆ. ■







'ಅಷ್ಟೇ ಅಲ್ಲ ಇತ್ತೀಚೆಗೆ ನಮ್ಮವರ 'ಬಾಯಿ ಮಾತುಗಳೂ' ವಿಷ ಆಗ್ತಿವೆ ಕಣ್ರೆ'




ಎಲ್ಲೂ ಪುಸ್ತಕ ಓದುತ್ತ ಅಭ್ಯಾಸ ಮಾಡಿದರೆ ನಿನ್ನ ಮಗ ನೋಡು ಪುಸ್ತಕ ಮೂಸುತ್ತ ಅಭ್ಯಾಸ ಮಾಡುತ್ತಿದ್ದಾನೆ